ಆ) ಸದರಿ ವಿಶೇಷ ಆರ್ಥಿಕ ವಲಯವನ್ನು ನವ ಮಂಗಳೂರು ಸುತ್ತಮುತ್ತಲಿನ ಪ್ರದೇಶ ಎಂಆರ್ ಪಿ.ಎಲ್ ತೈಲ ಶುದ್ದೀಕರಣ ಘಟಕದ ಸುತ್ತಮುತ್ತಲಿನ ಪ್ರದೇಶ ಹಾಗೂ ಬೈಕಂಪಾಡಿ ಪ್ರದೇಶದಲ್ಲಿ ಜಮೀನಿನಲ್ಲಿ ಸ್ಥಾಪಿಸಲಾಗುವುದು. ಯೋಜನೆಯ ಅನುಷ್ಟಾನಕ್ಕಾಗಿ ವಿಶೇಷ ಕಂಪನಿಯೊಂದನ್ನು ನೊಂದಾಯಿಸಲು ಕಾರ್ಯ ಪ್ರಗತಿಯಲ್ಲಿದೆ ಹಾಗೂ ಯೋಜನಾ ವೆಚ್ಚವನ್ನು ಅಂತಿಮಗೊಳಿಸಲಾಗಿದೆ.

೩೮೯೬ (೪೫೭೯) ಶ್ರೀ ರಾಜೇಂದ್ರವರ್ಮಾ (ಹುಲಸೂರು) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಈ ಸಾಲಿನಲ್ಲಿ ಮುರಾರ್ಜಿ ವಸತಿ ಶಾಲೆಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆಯೇ;

ಆ) ಬೀದರ್ ಜಿಲ್ಲೆ, ಹುಲಸೂರು ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಲ್ಲಿಗೆ ವಸತಿ ಶಾಲೆ ಮಂಜೂರು ಮಾಡಲು ಕ್ರಮ ಕೈಗೋಳ್ಳಲಾಗುವುದೇ;

ಇ) ಮಂಜೂರು ಮಾಡುವುದಾದರೆ ಯಾವಾಗ ಪ್ರಾರಂಭಿಸಲಾಗುವುದು?

ಡಾ.॥ ವೈ ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು, ೨೦೦೫-೦೬ ನೇ ಸಾಲಿನಲ್ಲಿ ಒಟ್ಟು ೪೩ ವಸತಿ ಶಾಲೆಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

೩೮೯೭ (೪೫೮೦) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :- ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳೇನು;

ಆ) ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳೆಷ್ಟು;

ಈ) ಇವುಗಳ ಪೈಕಿ ಕಳೆದ ಮೂರು ವರ್ಷಗಳಿಂದ ಮುಚ್ಚಿರುವ ಕೈಗಾರಿಕೆಗಳೆಷ್ಟು;

ಉ) ಕೈಗಾರಿಕೆಗಳನ್ನು ಮುಚ್ಚಲು ಕಾರಣಗಳೇನು, (ಜಿಲ್ಲಾವಾರು ವಿವರ ನೀಡುವುದು);

ಊ) ಓ.ಟಿ.ಎಸ್.ಯೋಜನೆಯಡಿ ಎಷ್ಟು ಅರ್ಜಿಗಳು, ಯಾವಾಗ ಬಂದಿವೆ, ಎಷ್ಟು ಕೈಗಾರಿಕೆಗಳಿಗೆ ಪರಿಹಾರ ನೀಡಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು) :

ಅ) ಕೈಗಾರಿಕೆಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಈ ಕೆಳಕಂಡಂತಿವೆ.

೧) ಜಾಗತೀಕರಣ

೨) ಉದಾರೀಕರಣ

೩) ಬಹುರಾಷ್ಟ್ರೀಯ ಕಂಪನಿಗಳಿಂದ ಪೈಪೋಟಿ

೪) ವಿಳಂಬ ಪಾವತಿ (ದೊಡ್ಡ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಹಣ ಪಾವತಿ ಮಾಡುವಲ್ಲಿ)

೫) ವಿದ್ಯುತ್ ಸಮಸ್ಯೆ

೬) ದುಡಿಮೆ ಬಂಡವಾಳದ ಸಮಸ್ಯೆ

೭) ಮಾರುಕಟ್ಟೆ ಸಮಸ್ಯೆ

೮) ಮಾಲೀಕರ ವಿವಾದಗಳು

ಆ) ಜಾಗತೀಕರಣ, ಉದಾರೀಕರಣ ನೀತಿಗಳಿಂದಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಕ್ಷೇತ್ರದಲ್ಲಿ ತೀವ್ರತರವಾದ ಪೈಪೋಟಿ ಉಂಟಾಗಿದ್ದು ಈ ಹಿನ್ನಲೆಯಲ್ಲಿ ಕೈಗಾರಿಕೆಗಳನ್ನು ನಿಯಂತ್ರಣಗಳಿಂದ ಮುಕ್ತ ಹಾಗೂ ಸರಳಗೊಳಿಸುವುದು ಅತಿ ಅವಶ್ಯಕವಾಗಿರುವುದರಿಂದ ಸರ್ಕಾರವು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ ೨೦೦೨ (Industrial Facilitation Act) ನ್ನು ಪ್ರಕಟಿಸಿದೆ. ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ (೧) ಸಂಯೋಜಿತ ಅರ್ಜಿ ಸಲ್ಲಿಸಲು ಅವಕಾಶ (೨) ಸ್ವಯಂ ಘೋಷಿತ ಪ್ರಮಾಣ ಪತ್ರ ಸಲ್ಲಿಸಲು ಅವಕಾಶ (೩) ಪರಿಭಾವಿತ ಅನುಮೋದನೆ ಇವುಗಳಿಂದಾಗಿ ಪ್ರವರ್ತಕರಿಗೆ ಒಂದೇ ಸ್ಥಳದಲ್ಲಿ ಮಾರ್ಗದರ್ಶನ ಹಾಗೂ ನೆರವನ್ನು ಒದಗಿಸುವ ಮೂಲಕ ರಾಜ್ಯದಲ್ಲಿ ಕೈಗಾರಿಕೆ ಮತ್ತು ಇತರೆ ಯೋಜನೆಗಳ ತ್ವರಿತ ಅನುಷ್ಠಾನಗೊಳಿಸುವುದು ಇದರ ಮೂಲೋದ್ದೇಶವಾಗಿದೆ.

ಸಣ್ಣ ಕೈಗಾರಿಕೆಗಳ ಹಿತ ರಕ್ಷಣೆಗಾಗಿ ಕೈಗಾರಿಕಾ ನೀತಿ ೨೦೦೧-೦೬ ರಂತೆ ಅನೇಕ ರಿಯಾಯ್ತಿ ಸೌಲಭ್ಯಗಳನ್ನು ನೀಡಲಾಗಿದೆ ಹಾಗೂ ಕೈಗಾರಿಕೆಗಳ ಬೆಳವಣಿಗೆಗಾಗಿ ಕೆಳಕಂಡ ಅಂಶಗಳ ಬಗ್ಗೆ ಒತ್ತು ನೀಡಲಾಗಿದೆ.

೧. ೨೦೦೪-೦೫ ನೇ ಸಾಲಿನಲ್ಲಿ ಇದುವರೆಗೂ ಒಟ್ಟು ೬೮೬೫ ಘಟಕಗಳಿಗೆ ರೂ.೮೧.೦೦ ಕೋಟಿಗಳ ಸಹಾಯಧನ ಬಿಡುಗಡೆ ಮಾಡಲಾಗಿದೆ, ಪೂರಕ ಆಯವ್ಯಯದಲ್ಲಿ ಮಾರ್ಚ್ ೨೦೦೫ ರಲ್ಲಿ ರೂ. ೬೫.೦೦ ಕೋಟಿಗಳ ಸಹಾಯಧನವನ್ನು ಸಹ ಬಿಡುಗಡೆ ಮಾಡಲಾಗಿದೆ.

೨. ಸರ್ಕಾರಕ್ಕೆ ಕೈಗಾರಿಕಾ ನೀತಿ ಮತ್ತು ಬೆಳವಣಿಗೆ ಬಗ್ಗೆ ಸಲಹೆಗಳನ್ನು ನೀಡಲು ಅನುವಾಗುವಂತೆ ಮೊದಲ ಬಾರಿಗೆ ಸಣ್ಣ ಕೈಗಾರಿಕಾ ಸಲಹಾ ಸಮಿತಿಯನ್ನು ರಚಿಸಲಾಗಿದೆ.

೩ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ. ನಂಜುಡಪ್ಪ ಸಮಿತಿ ಶಿಫಾರಸ್ಸಿನಂತೆ ಅತಿ ಹೆಚ್ಚು ಹಿಂದುಳಿದ ೩೯ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು ೨೦೦೫-೦೬ ನೇ ಸಾಲಿನ ಆಯವ್ಯಯದಲ್ಲಿ ರೂ. ೨೫.೦೦ ಕೋಟಿಗಳನ್ನು ಒದಗಿಸಲಾಗಿದೆ.

೪. ಸಮೂಹ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಕೇಂದ್ರ ಸರ್ಕಾರದ ಕೈಗಾರಿಕಾ ಮೂಲಭೂತ ಸೌಲಭ್ಯ ಉನ್ನತೀಕರಣ ಯೋಜನೆಯಡಿಯಲ್ಲಿ ಈಗಾಗಲೇ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಈ ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಈ ಕೆಳಕಂಡ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರಕಿರುತ್ತದೆ.

I) ಬೆಳಗಾಂ ಫೌಂಡ್ರಿ ಕ್ಲಸ್ಟರ್ , ಬೆಳಗಾಂ

II) ಮೆಷಿನ್ ಟೂಲ್ ಕ್ಲಸ್ಟರ್, ಬೆಂಗಳೂರು ಹುಬ್ಬಳ್ಳಿಯಲ್ಲಿ ಇಂಡಸ್ಟ್ರಿಯಲ್ ವಾಲ್ವ್ ಕ್ಲಸ್ಟರ್, ಚನ್ನಪಟ್ಟಣ ಮತ್ತು ಹಾಸನದಲ್ಲಿ ಕಾಯಿರ್ ಕ್ಲಸ್ಟರ್, ಶಿವಮೊಗ್ಗದಲ್ಲಿ ಆಟೊ ಕ್ಲಸ್ಟರ್, ಅಥಣಿಯಲಿ ಲೆದರ್ ಕ್ಲಸ್ಟರ್‌ಗಳನ್ನು ಮತ್ತು ಗುಲ್ಬರ್ಗದಲ್ಲಿ ಬೇಳೆ ಕ್ಲಸ್ಟರನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

೫. ಸಣ್ಣ ಕೈಗಾರಿಕಾ ಉದ್ದಿಮೆದಾರರನ್ನು ಪ್ರೋತ್ಸಾಹಿಸಲು ಸರ್ಕಾರ ಪ್ರಶಸ್ತಿಗಳನ್ನು ಸಣ್ಣ ಕೈಗಾರಿಕೆಗಳ ಅತ್ಯುತ್ತಮ ರಫ್ತುದಾರರಿಗೆ ನೀಡುತ್ತಿದೆ.

ಇ) ರಾಜ್ಯದಲ್ಲಿ ದಿನಾಂಕ : ೩೧-೩-೨೫ ರ ಅಂತ್ಯಕ್ಕೆ ೩,೨೧,೬೭೬ ಸಣ್ಣ ಪ್ರಮಾಣದ ಕೈಗಾರಿಕೆಗಳು ಇವೆ.

ಈ) ೩ನೇ ಅಖಿಲಭಾರತ ಸಣ್ಣ ಪ್ರಮಾಣ ಕೈಗಾರಿಕೆಗಳ ಗಣತಿಯ ವರದಿಯ ಪ್ರಕಾರ ರಾಜ್ಯದಲ್ಲಿ ೪೬,೬೧೧ ಘಟಕಗಳು ಮುಚ್ಚಿರುತ್ತವೆ.

ಉ) ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿ ಕೈಗಾರಿಕೆಗಳು ಮುಚ್ಚಲು ಉದಾರೀಕರಣ, ಜಾಗತಿಕರಣ ನೀತಿ, ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ, ವಿಳಂಬ ಪಾವತಿ (ದೊಡ್ಡ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಹಣ ಪಾವತಿ ಮಾಡುವಲ್ಲಿ); ವಿದ್ಯುತ್ ಸಮಸ್ಯೆ, ದುಡಿಮೆ ಬಂಡವಾಳದ ಸಮಸ್ಯೆ, ಮಾರುಕಟ್ಟೆ ಸ್ಪರ್ಧೆ ಮತ್ತು ಮಾಲೀಕರ ವಿವಾದಗಳು ಪ್ರಮುಖ ಕಾರಣಗಳಾಗಿರುತ್ತವೆ.

ಊ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ೧.೪.೧೯೯೩ ರಿಂದ ೩೧.೩.೨೦೦೫ರ ಅಂತ್ಯದವರೆಗಿನ ಅವಧಿಯಲ್ಲಿ ಓ.ಟಿ.ಎಸ್ ಯೋಜನೆಯಡಿಯಲ್ಲಿ ೧೯,೯೪೮ ಅರ್ಜಿಗಳನ್ನು ಸ್ವೀಕರಿಸಿದೆ. ಇದರಲ್ಲಿ ಸಂಸ್ಥೆಯು ೧೮,೯೬೪ ಘಟಕಗಳಿಗೆ ಓ.ಟಿ.ಎಸ್. ಸೌಲಭ್ಯ ಕಲ್ಪಿಸಿದೆ.

೩೮೯೮: (೪೫೮೧೧) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುತ್ತಿರುವ ವಸತಿ ನಿಲಯಗಳೆಷ್ಟು; ಹಾಗೂ ಅವು ಯಾವುವು;

ಆ) ಬೀದರ್ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಎಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿ, ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಹಾಗೂ ಎಲ್ಲೆಲ್ಲಿ ಆರಂಭಿಸಲಾಗುವುದು;

ಇ) ಇದಕ್ಕಾಗಿ ಬಿಡುಗಡೆಯಾದ ಹಣ ಎಷ್ಟು;

ಈ) ಈ ಎಲ್ಲಾ ಯೋಜನೆಗಳ ಅನುಷ್ಠಾನದ ಜವಾಬ್ದಾರಿಯನ್ನು ಯಾವ ಇಲಾಖೆಗೆ ವಹಿಸಲಾಗಿದೆ; ಯೋಜನೆಗಳ ವಿವರ ಒದಗಿಸುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಟ್ಟು ೧೪೩೬ ವಿದ್ಯಾರ್ಥಿನಿಲಯಗಳಿದ್ದು ವಿವರ ಕೆಳಕಂಡಂತಿದೆ.